**ಮಲ್ಲಿಕಾರ್ಜುನ ಹುಲಗಬಾಳಿ**

ಕಲೆ: ಪ್ರವೀಣ್ ಆಚಾರ್ಯ

# ಹಾಗೇ ಸುಮ್ಮನೆ...

ನಾನು ಪ್ರಾಥಮಿಕ ಶಾಲೆಯ ಹುಡುಗನಾಗಿದ್ದಾಗ, ನಮಗೊಬ್ಬ ಮಾಸ್ತರರು ಇದ್ದರು. ದಪ್ಪನೆಯ ಕಪ್ಪು ಮೀಸೆಯ ಆಜಾನುಬಾಹು ಆಳು. ಬೀಭತ್ಸ ರಸಕ್ಕೆ ಸರಿದೂಗಬಹುದಾದಂಥ ಘನದೇಹಾಕೃತಿ ಅವರದು. ಒಮ್ಮೆ ನಮ್ಮೂರ ಜಾತ್ರೆಯಲ್ಲಿ ಆಡಿದ ಸತ್ಯವಾನ ಸಾವಿತ್ರಿ ನಾಟಕದಲ್ಲಿ ಮಾಸ್ತರರು ಯಮನ ಪಾತ್ರ ಹಾಕಿ ಸೈ ಅನಿಸಿಕೊಂಡಿದ್ದರು. ಇಂತಿಪ್ಪ ಮಾಸ್ತರರು ಕ್ಲಾಸಿನಲ್ಲಿ ಯಮಸ್ವರೂಪಿಯೇ ಸರಿ. ತುಂಬ ಖಡಕ್ ಅಂದ್ರೆ ಖಡಕ್.

'ಯಾರ್ ಅಭ್ಯಾಸ ಮಾಡಾಂಗಿಲ್ಲಾ ಅವರ ಚಮರ್ಾ ಸುಲಿತೀನಿ... ಚಮರ್ಾ, ಮಕ್ಕಳಯರ್ಾ ಏನಂತ ತಿಳ್ಕೊಂಡಿರಿ ನಾ ಅಂದ್ರ' ಅಂತ ಕಣ್ಣಗಲಿಸಿ, ಜೋರಾಗಿ ಆವಾಜ್ ಹಾಕಿದರೋ, ಹುಡುಗರಾದ ನಾವು ಕುಂತ ಕುಂತಲ್ಲೆ ಗಡಗಡ ನಡುಗಬೇಕು. ಮಾಸ್ತರರ ಕೈಯೊಳಗಿನ ಉದ್ದನೆಯ ಬಡಿಗೆಗೆ, ಅದನ್ನೂ ಮೀರಿಸಿದ ಅವರ ಸಿಂಹಗರ್ಜನೆಗೆ ಅಂಜಿಸಾಯುತ್ತಿದ್ದೆವು.

ಆದರೆ, ಮಾಸ್ತರರು ಹಂಗೇ ಅಂತಿದ್ದರೆ ಹೊರತು, ಯಾರ ಮೇಲೂ ಒಮ್ಮೆಯೂ ಕೈಎತ್ತಿ ಹೊಡೆದವರಲ್ಲ. ಕೇವಲ ಬಾಯ್ಮಾತಿನಲ್ಲಿ ಹೆದರಿಸುತ್ತ, ಹುಡುಗರನ್ನು ಹದ್ದುಬಸ್ತಿನಲ್ಲಿಡುತ್ತಿದ್ದರು. ಸದರಿ ಮಾಸ್ತರರು ನಿವೃತ್ತರಾಗುವವರೆಗೂ, ತಮ್ಮ 'ಯಮರಾಜ್ ಇಮೇಜ್' ಅನ್ನು ಹಾಗೆಯೇ ಉಳಿಸಿಕೊಂಡಿದ್ದರು. ಇದೊಂದು ನಮೂನೆಯಲ್ಲಿ ಯಮಧರ್ಮ ಪಾಲಿಸಿದ ಅಹಿಂಸಾ ಧರ್ಮಸೂತ್ರ ಅನ್ನಬಹುದೇನೊ!

ಹೌದಲ್ಲ, ಹೀಗೂ ಬಾಯ್ಮಾತಿನಲ್ಲಿ ಹೆದರಿಕೆ ಹುಟ್ಟಿಸಿ, ಕಾರ್ಯ ಈಡೇರಿಸಿಕೊಳ್ಳಬಹುದು ಎಂಬುದಕ್ಕೆ ಈ ಮಾಸ್ತರರು ಉದಾಹರಣೆಯಾಗುತ್ತಾರೆ.

ನಮ್ಮ ಮಾಸ್ತರರಂತೆಯೆ 'ಹಂಗೇ ಅಂತಿರತಾರ'

